

ನೀವೇ ಮಾಡ್ರೀ, ಇಲ್ಲ ಉಪವಾಸ ಸಾಯ್ರೀ...' ಎಂದು ಕೆರಳಿದಳು. ಇದೇ ವಿಚಾರಕ್ಕೆ ಗಂಡನ ಮೇಲೆ ದೊಡ್ಡ ಜಗಳ ಮಾಡಿದಳು.

ಗಂಡ, ಹೆಂಡತಿ ಜಗಳ ಉಂಡು ಮಲಗುವ ತನಕ ಅನ್ನುತ್ತಾರೆ. ಆದರೆ ಮಲಗುವ ಮೊದಲು ಉಣ್ಣಲು ಅಡುಗೆ ಮಾಡುವವರು ಯಾರು? ಎಂಬ ಪ್ರಶ್ನೆ ಎದುರಾಗಿ 'ನೀನು ಮಾಡು, ನೀನು ಮಾಡು...' ಎಂಬ ವಾದದೊಂದಿಗೆ ಜಗಳ ಮುಂದುವರೆಯಿತು. ಹಿಂದೆ ಗಂಡ–ಹೆಂಡತಿ ಜಗಳದಲ್ಲಿ ಕೂಸುಗಳು ಬಡವಾಗುತ್ತಿದ್ದವು. ಆದರೆ ಈಗಿನ ಕೂಸುಗಳು ಅಪ್ಪಅಮ್ಮನ ಜಗಳವನ್ನು ಮೊಬೈಲ್‌ನಲ್ಲಿ ಲೈವ್ ಮಾಡಿಬಿಡುತ್ತವೆ ಎಂಬ ಎಚ್ಚರಿಕೆ ಇಬ್ಬರಿಗೂ ಇತ್ತು. ಮಕ್ಕಳ ಕೈಗೆ ಮೊಬೈಲ್ ಸಿಗದಂತೆ ನೋಡಿಕೊಂಡು ಜಗಳವಾಡಿದರು.

ಜಗಳ, ರಗಳೆಗೂ ಶಂಕ್ರಿ ಬಗ್ಗಲಿಲ್ಲ, ಅಡುಗೆ ಕಲಿಯಲಿಲ್ಲ. ಏನಾದರೂ ಮಾಡಲೇಬೇಕು ಎಂದುಕೊಂಡಳು ಸುಮಿ. ಏನು ಮಾಡೋದು? 'ಗಂಡನಿಗೆ ಅಡುಗೆ ಬರೋದಿಲ್ಲ' ಅಂತ ಪೊಲೀಸರಿಗೆ ಕಂಪ್ಲೇಂಟ್ ಕೊಡಲಾಗುತ್ತಾ? ನಾನೇ ಏನಾದರೂ ಮಾಡಬೇಕು ಎಂದುಕೊಂಡಳು.

ಮತ್ತೊಂದು ಪ್ರಯತ್ನವಾಗಿ ಇನ್ನೊಂದು ದಿನ ಸುಮಿ ಒಲೆ ಹಚ್ಚದೆ ಉಪವಾಸ ಸತ್ಯಾಗ್ರಹ ಆರಂಭಿಸಿದಳು. ಉಪವಾಸ ಸತ್ಯಾಗ್ರಹಕ್ಕೆ ಸರ್ಕಾರಗಳೇ ಸೋಲುತ್ತವೆ, ಗಂಡ ಸೋಲುವುದಿಲ್ಲವೇ ಎಂಬ ನಂಬಿಕೆಯಿಂದ. ಸತ್ಯಾಗ್ರಹಕ್ಕೆ ಶಂಕ್ರಿ ಬೆದರಿದನಾದರೂ ಅಡುಗೆ ಮಾಡಿ ಹೆಂಡತಿಗೆ ತಿನ್ನಿಸಿ ಉಪವಾಸ ಅಂತ್ಯಗೊಳಿಸುವ ಪ್ರಯತ್ನ ಮಾಡಲಿಲ್ಲ. ಬದಲಿಗೆ ಹೋಟೆಲ್‌ನಿಂದ ಊಟ ತಿಂಡಿ ತಂದುಕೊಟ್ಟು ಸಾರಿ ಕೇಳಿ ಅವಳ ಸಿಟ್ಟನ್ನು ಮತ್ತಷ್ಟು ಏರಿಸಿದ್ದ.

ಸುಮಿ ಚಿಂತಾಕ್ರಾಂತಳಾದಳು. ಕಡೇ ಪ್ರಯತ್ನ ಎಂಬಂತೆ ಸುಮಿ, 'ಹೊರಗೆ ಹೋಗುತ್ತಿದ್ದೇನೆ, ನಾನು ವಾಪಸ್ ಬರುವಷ್ಟರಲ್ಲಿ ಅಡುಗೆ ಮಾಡಿರಬೇಕು, ಇಲ್ಲದಿದ್ದರೆ ನಾನು ನಾನಾಗಿರುವುದಿಲ್ಲ, ಕಠಿಣ ತೀರ್ಮಾನ ತೆಗೆದುಕೊಳ್ಳುತ್ತೇನೆ, ಹುಷಾರ್...' ಎಂಬ ಎಚ್ಚರಿಕೆ ನೀಡಿ ಹೆಗಲಿಗೆ ಬ್ಯಾಗೇರಿಸಿಕೊಂಡು ಮಕ್ಕಳನ್ನೂ ಕರೆದುಕೊಂಡು ಹೊರಟಳು.

ಶಂಕ್ರಿಗೆ ಅಡುಗೆ ಸವಾಲು ಎದುರಾಗಿತ್ತು. ಯೋಚಿಸಿದ, ಚಿಂತಿಸಿದ. 'ನಾನು ಅಡುಗೆ ಕಲಿಯಬೇಕೆಂದು ಹೆಂಡತಿ ಇಷ್ಟೊಂದು ಒತ್ತಾಯ ಮಾಡುತ್ತಿದ್ದಾಳೆ. ಅವಳ ಅದೊಂದು ಆಸೆ ಈಡೇರಿಸದ ನಾನೂ ಒಬ್ಬ ಗಂಡನಾ? ಛೇ...' ಅನಿಸಿತು ಶಂಕ್ರಿಗೆ. 'ಅಡುಗೆ ಮಾಡುವುದು ಬ್ರಹ್ಮ ವಿದ್ಯೆಯಲ್ಲ, ನಳ ಪಾಕ, ಭೀಮ ಪಾಕದಂತೆ ನನ್ನದೂ ಒಂದು ಪಾಕ ತಯಾರಿಸಿ ಹೆಂಡತಿಗೆ ಬಡಿಸಿ ಭೇಷ್ ಎನಿಸಿಕೊಳ್ಳಬೇಕು' ಎಂದು ಸಂಕಲ್ಪ ಮಾಡಿದ. ಆದರೆ ಅಡುಗೆ ಮಾಡುವುದು ಹೇಗೆ? ಪೀಕಲಾಟ ಶುರುವಾಯ್ತು.

ಹೇಗೋ ಅನ್ನ ಮಾಡಿಟ್ಟ. ಸಾಂಬಾರ್ ಮಾಡುವ ವಿಧಾನದ ಸಣ್ಣ ತಿಳಿವಳಿಕೆಯೂ ಇಲ್ಲ. ಯಾವ ಪದಾರ್ಥ ಯಾವ ಡಬ್ಬದಲ್ಲಿದೆ ಎಂಬ ಅರಿವೂ ಇಲ್ಲ. ಹೆಂಡತಿ ಅಡುಗೆ ಮಾಡುವಾಗ ಯಾವತ್ತಾದರೂ ಪ್ರೀತಿಯಿಂದ ಅವಳ ಹಿಂದೆ ನಿಂತು ಇಣುಕಿ, ಕೆಣಕಿ ನೋಡಿದ್ದರೆ ಅದೆಲ್ಲಾ ಗೊತ್ತಾಗುತ್ತಿತ್ತೇನೋ. ಆದರೂ ಈಗ ಅಡುಗೆ ಮಾಡಲೇಬೇಕು. ಟಿ.ವಿ.ಯಲ್ಲಿ ಅಡುಗೆ ಕಾರ್ಯಕ್ರಮ ವೀಕ್ಷಿಸಿ ಅಂದಾಜು ಮಾಡಿಕೊಂಡ, ಅಡುಗೆ ಪುಸ್ತಕ ಸ್ಟಡಿ ಮಾಡಿ ಕನ್‌ಫ್ಯೂಸ್ ಮಾಡಿಕೊಂಡ.

ತರಕಾರಿ ಹೆಚ್ಚಿಕೊಂಡು ಬೇಯಿಸಿ, ತೋಚಿದ್ದನ್ನು ಹಾಕಿ ರುಚಿ ನೋಡಿದ, ಅತ್ಯಂತ ಕೆಟ್ಟದಾಗಿತ್ತು. ಆಚೆ ಸುರಿದು ಬಂದು ಮತ್ತೊಮ್ಮೆ ಪ್ರಯತ್ನಿಸಿದ. ಅದೂ ಕೆಟ್ಟಿತ್ತು. ಹೀಗೆ ಕೆಟ್ಟ ಪ್ರಯತ್ನ ಮುಂದುವರೆಸಿದ.

ಕೊತ್ತಂಬರಿ ಸೊಪ್ಪಿಗಾಗಿ ಪಕ್ಕದ ಮನೆ ಪದ್ಮಾ ಬಂದಳು. ಸುಮಿ ಇಲ್ಲದ ಅಡುಗೆ ಮನೆಯಲ್ಲಿ ಶಂಕ್ರಿಯ ಅಡುಗೆ ಫಜೀತಿ ಕಂಡು 'ಅಯ್ಯೋ ಪಾಪ!' ಅಂದುಕೊಂಡಳು.

'ಯಾಕೆ ಪರದಾಡ್ತೀರಿ, ನಾನು ಸಾಂಬಾರ್ ತಂದುಕೊಡ್ತೀನಿ' ಎಂದು ಹೇಳಿ ಹೋಗಿ ಒಂದು ಬಟ್ಟಲು ಸಾಂಬಾರ್ ತಂದುಕೊಟ್ಟು ಊಟ ಮಾಡಿ ಎಂದು ಹೇಳಿ ಹೋದಳು.

ಶಂಕ್ರಿಯ ಅಡುಗೆ ಪರದಾಟ ನೆರೆಹೊರೆ ಹೆಂಗಸರ ಕಿವಿಗೆ ಬಿತ್ತು. ಅವರೂ ಕನಿಕರಗೊಂಡು ಒಬ್ಬೊಬ್ಬರೂ ಅವರ ಮನೆಯಲ್ಲಿ ಮಾಡಿದ್ದ ಒಂದೊಂದು ಬಟ್ಟಲು ಸಾಂಬಾರ್ ತಂದುಕೊಟ್ಟರು.

ಅಷ್ಟೊತ್ತಿಗೆ ಶಂಕ್ರಿಗೆ ಅಡುಗೆ ಸಾಹಸದಿಂದ ಸುಸ್ತಾಗಿತ್ತು. ಹೆಂಗಸರು ತಂದುಕೊಟ್ಟ ಎಲ್ಲಾ ಸಾಂಬಾರನ್ನು ಒಂದೇ ಪಾತ್ರೆಗೆ ಸುರಿದು ಕುದಿಸಿ ತೆಪ್ಪಗಾದ. ಹೆಂಡತಿಯ ಬೈಗುಳಕ್ಕೆ ಸಿದ್ಧನಾಗಿದ್ದ.

ಆ ವೇಳೆಗೆ ಬಂದ ಸುಮಿ ಮೂಗು ಅಗಲಿಸಿ ಸಾಂಬಾರ್ ವಾಸನೆ ಗ್ರಹಿಸಿದಳು. 'ಸಾಂಬಾರ್ ಸ್ಮೆಲ್ ಚೆನ್ನಾಗಿದೆ ಕಣ್ರೀ...' ಎನ್ನುತ್ತಾ ಅಡುಗೆ ಮನೆಗೆ ಹೋಗಿ ಬಡಿಸಿಕೊಂಡು ಊಟ ಮಾಡಿದಳು. 'ಅದ್ಭುತವಾಗಿ ಸಾಂಬಾರ್ ಮಾಡಿದ್ದೀರಿ, ನಾನು ಯಾವತ್ತೂ ಇಂಥ ರುಚಿಯ ಸಾಂಬಾರ್ ಮಾಡೇಯಿಲ್ಲ, ಭೇಷ್, ಕಳ್ಳ ನೀವು! ಅಡುಗೆ ಗೊತ್ತಿದ್ದೂ ಮಾಡಲು ಮೈ ಬಗ್ಗಿಸದೆ ಕಳ್ಳಾಟ ಆಡ್ತೀರಿ...' ಎಂದು ಖುಷಿಪಟ್ಟಳು. ಶಂಕ್ರಿ ಗಾಬರಿಯಾದ.




ಪ್ರತಿಕ್ರಿಯಿಸಿ: feedback@sudha.co.in